ಈ) ಹಾಗಿದ್ದಲ್ಲಿ ಈ ಕುರಿತಾದ ವಿವರಗಳೇನು?

ಉ) ಈ ನೋಂದಣಿ ನಿಷೇಧದಿಂದ ಬಡವರಿಗೆ ಆಗಿರುವ ಅನಾನುಕೂಲತೆ ಮತ್ತು ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟದ ಬಗ್ಗೆ ಸರ್ಕಾರ ಆಲೋಚಿಸಿದೆಯೇ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು):

ಅ) ಮತ್ತು ಆ) – ಹೌದು – ದಿನಾಂಕ: 23–4–2005ರಂದು ಸರ್ಕಾರ ಅಧಿಸೂಚನೆ ಹೊರಡಿಸಿ, ಕಂದಾಯ ಮತ್ತು ಗ್ರಾಮಠಾಣಗಳ ನಿವೇಶನ ಮತ್ತು ಮನೆಯ ನೋಂದಣಿಯನ್ನು ನಿರ್ಬಂಧಿಸಿದೆ. ಈ ನಿರ್ಬಂಧನೆಯಿಂದ ಈಗಾಗಲೇ ಕ್ರಯಕ್ಕೆ ಪಡೆದಿರುವ ನಿವೇಶನಗಳ ಮರು ಮಾರಾಟಕ್ಕೆ ಕೆಲವು ದಾಖಲಾತಿಗಳು ಅಂದರೆ, ಜಿಲ್ಲಾಧಿಕಾರಿಗಳ ಪರಿವರ್ತನಾ ಆದೇಶ, ಸೂಕ್ತ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಲೇಔಟ್ ಪ್ಲಾನ್ ಮತ್ತು ಬಿಡುಗಡೆ ಪತ್ರ ಪಡೆಯುವುದನ್ನು ಕಡ್ಡಾಯ ಮಾಡಲಾಗಿದೆ. ಈ ದಾಖಲಾತಿಗಳನ್ನು ಹಾಜರ್ಪಡಿಸಿದಲ್ಲಿ ನೋಂದಣಿ ಮಾಡಲಾಗುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ತೊಂದರೆಗಳನ್ನು ಸೂಕ್ತವಾಗಿ ಪರಿಹರಿಸಲು ಕಂದಾಯ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಜಂಟಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಈಗಾಗಲೇ 3ಬಾರಿ ದೀರ್ಘಕಾಲ ಸಭೆ ನಡೆಸಿ, ಸಂಬಂಧಿಸಿದ ಸಮಸ್ಯೆಗಳನ್ನು ಕೂಲಂಕುಷವಾಗಿ ಚರ್ಚಿಸಿದೆ ಹಾಗೂ ಈ ಸಮಸ್ಯೆಗಳಿಗೆ ಪರಿಹಾರ ರೂಪದಲ್ಲಿ ಕೆಲವೊಂದು ಸೂಕ್ತ ಮಾರ್ಗದರ್ಶನ, ನಿರ್ದೇಶನ ಹಾಗೂ ಯೋಜನೆಗಳನ್ನು ರೂಪಿಸಲಾಗುತ್ತಿದೆ.

2004–05ನೇ ಸಾಲಿನಲ್ಲಿ ಮೇ 2004 ರಲ್ಲಿ 118.87 ಕೋಟಿ ರೂ.ಗಳು ಸಂಗ್ರಹವಾಗಿರುತ್ತದೆ ಮತ್ತು 2005ರಲ್ಲಿ 120.77 ಕೋಟಿ ರೂ.ಗಳು ಸಂಗ್ರಹವಾಗಿರುತ್ತದೆ.

4813(5650) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್): ಮಾನ್ಯ, ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಕ್ಕು ಪತ್ರ ನೀಡುವಾಗ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶ ಎಂದು ಪರಿಗಣಿಸಿ ಶುಲ್ಕ ವಿಧಿಸಿದ್ದರೆ ಅದರ ವಿವರಗಳೇನು;

ಆ) ಹಾಗೆಯೇ ಹಕ್ಕು ಪತ್ರ ನೀಡಿಕೆಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಇರುವ ವ್ಯತ್ಯಾಸದ ಅಂಶಗಳು ಯಾವುವು;

ಇ) ಈ ಬಗ್ಗೆ ನಗರ ಪ್ರದೇಶದವರಿಗೆ ವಿಧಿಸಿರುವ ಶುಲ್ಕ ಹೆಚ್ಚು ಪ್ರಮಾಣದ್ದು ಎಂದು ನಾಗರೀಕರು ಅಭಿಪ್ರಾಯ ಪಟ್ಟಿರುವುದನ್ನು ಸರ್ಕಾರ ಗಮನಿಸಿಲ್ಲವೆ;

ಈ) ಈ ತಾರತಮ್ಯವನ್ನು ಸರಿದೂಗಿಸುವಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಸಿ ಅಡಿಯಲ್ಲಿನ ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳ 1999ರ ನಿಯಮ 6ರ ಕೋಷ್ಟಕ ಅನುಬಂಧಿಸಲಾಗಿದೆ. ಅದರಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ನಿಗಧಿ ಪಡಿಸಿದ ಮೌಲ್ಯದಲ್ಲಿ ಶೇಕಡಾ 50ರ ವಿನಾಯಿತಿ ನೀಡಲಾಗಿದೆ. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಒಳಗೊಂಡಂತೆ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಅಂದರೆ ಯಾರ ವಾರ್ಷಿಕ ಆದಾಯ ರೂ.11.800ಕ್ಕಿಂತ ಕಡಿಮೆ ಇರುವವರಿಗೆ, ನಗರ ಪ್ರದೇಶದಲ್ಲಿನ 20x30 ಅಡಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿನ 30x40 ಅಡಿ ವಿಸ್ತೀರ್ಣದ ನಿವೇಶನಗಳಿಗೆ ಪೂರ್ತಿ ವಿನಾಯಿತಿ ನೀಡಲಾಗಿದೆ.

ಆ) ಗಮನಿಸಿದೆ.

ಇ) ಈ ತಾರತಮ್ಯ ಹೋಗಲಾಡಿಸಲು 6ನೇ ನಿಯಮದಲ್ಲಿ ಎರಡನೇ ಪರಂತುಕಕ್ಕೆ ಬದಲಾಗಿ ಸಂಖ್ಯೆ: ಆರ್‌ಡಿ 22 ಎಲ್‌ಜಿಪಿ 2004, ದಿನಾಂಕ;06.06.2005ರಂದು ಹೊರಡಿಸಿದ ಪ್ರಥಮ ಅಧಿಸೂಚನೆ ಅನ್ವಯ ಈ ಕೆಳಕಂಡಂತೆ ಪರಂತುಕನ್ನು ಪ್ರತಿಯೋಜಿಸಲು ಸರ್ಕಾರವು ನಿರ್ಧರಿಸಿದೆ. ಮತ್ತು ಅಂತಿಮ ಅಧಿಸೂಚನೆ ಹೊರಡಿಸುವ ಮುನ್ನ ಸಾರ್ವಜನಿಕರ ಆಕ್ಷೇಪಣೆ/ಸಲಹೆ ಕೋರಲಾಗಿದೆ.

4814(5330) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ): ಮಾನ್ಯ, ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಪಿ.ಟಿ.ಸಿ.ಎಲ್. ಕಾಮಗಾರಿಗಳನ್ನು ಹಾಗೂ ಅದರ ಅಧೀನದಲ್ಲಿ ಬರುವ ವಿವಿಧ ಕಂಪನಿಗಳೆಷ್ಟು; BESCOM etc.,